# ಶ್ರೀರಾಮಕೃಷ್ಣ ಅವತಾರದ ವೈಶಿಷ್ಟ್ಯ

● ಸ್ವಾಮಿ ಆತ್ಮವಿದಾನಂದ

ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ, ವಿಶೇಷವಾಗಿ ಆಧುನಿಕ ಸಮಯದಲ್ಲಿ, ಧರ್ಮದ ನಿತ್ಯಸತ್ಯಗಳಿಗೆ ಸುಲಭ-ಗ್ರಾಹ್ಯವಾದ ಸಾಕ್ಷಿ ಹಾಗೂ ದೃಢತೆಗಳನ್ನು ತಂದುಕೊಟ್ಟಿರುವುದು ಭಗವಾನ್ ಶ್ರೀರಾಮಕೃಷ್ಣರ ಜೀವನ ಸಂದೇಶಗಳು. ದೇವರು ಅಥವಾ ಪರಮಸತ್ಯವೆಂಬುದು ಅವರ ಬದುಕಿನ ಪ್ರತಿ ಕ್ಷಣದಲ್ಲಿಯೂ ಅನುಭವಗಮ್ಯವಾಗಿತ್ತು. ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಜೀವನಸಂದೇಶಗಳ ಸಾರ ಸರ್ವಸ್ವವನ್ನು ಸಂಗ್ರಹರೂಪದಲ್ಲಿ ನಾವು ಹೀಗೆ ಗುರುತಿಸಬಹುದು:



೧. ಮಾನವ ಜೀವನದ ಗುರಿ ಆತ್ಮಸಾಕ್ಷಾತ್ಕಾರ ಅಥವಾ ಭಗವಂತನನ್ನು ಪಡೆಯುವುದು.

೨. ವಿವಿಧ ಧರ್ಮಗಳು, ಮತಗಳು ಆ ಭಗವಂತನನ್ನು ಸೇರಲು ಇರುವ ವಿವಿಧ ಮಾರ್ಗಗಳು.

೩. ಶಿವಭಾವದಲ್ಲಿ ಜೀವಸೇವೆ.

೪. ಎಲ್ಲ ಸ್ತ್ರೀಯರಲ್ಲೂ ಜಗನ್ಮಾತೆಯ ದರ್ಶನ.

ಈ ಮೇಲಿನ ಪ್ರತಿಯೊಂದೂ ಅವರ ಆಧ್ಯಾತ್ಮಿಕ ಅನುಭವಗಳಿಂದ ಹೊರಹೊಮ್ಮಿದ ಸತ್ಯಗಳು. ಇವು ಪಾಂಡಿತ್ಯದ ಮಾತುಗಳಲ್ಲ. ತಮ್ಮ ಸ್ವಂತ ಜೀವನ, ಸಾಧನೆಗಳ ಮೂಲಕ ಅಂತರಾಳದಲ್ಲಿ ಅನುಭವಿಸಿದ ಸತ್ಯಗಳು ಇವು. ಹೀಗಾಗಿ ಅವುಗಳಿಗೆ ತಮ್ಮದೇ ಆದ ಶಕ್ತಿ ಇದೆ.

**ಮಾನವ ಜೀವನದ ಗುರಿ:**

ಶ್ರೀರಾಮಕೃಷ್ಣರು ತಮ್ಮ ಬಾಲ್ಯದಿಂದಲೆ ಪರಮ ಸತ್ಯದ ಆರಾಧಕರಾಗಿದ್ದರು. ಸತ್ಯನಿಷ್ಠೆ, ಭಾವೈಕ್ಯತೆ ಮುಂತಾದುವು ಅವರ ರಕ್ತದಲ್ಲಿ ಹರಿಯುತ್ತಿದ್ದುವು. ಉಪನಯನದ ಸಮಯದಲ್ಲಿ ಮೊದಲ ಭಿಕ್ಷೆ ಸ್ವೀಕರಿಸುವ ಪ್ರಸಂಗವಿರಬಹುದು ಅಥವಾ ಶಿವರಾತ್ರಿಯಂದು ಶಿವನ ಪಾತ್ರ ವಹಿಸುವ ಸಂದರ್ಭವಿರಬಹುದು. ಯಾವ ಮಾತನ್ನು ಆಡುತ್ತಿದ್ದರೋ, ಯಾವ ವೇಷವನ್ನು ಧರಿಸುತ್ತಿದ್ದರೋ ಅದರೊಂದಿಗೆ ಪೂರ್ತಿಯಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು, ತಾದಾತ್ಮ್ಯ ಹೊಂದುತ್ತಿದ್ದರು.

ಮುಂದೆ ದಕ್ಷಿಣೇಶ್ವರದಲ್ಲಿ ಭವತಾರಿಣೀ ಮಾತೆಯ ಅರ್ಚಕರಾಗಿದ್ದಾಗ ತಾವು ಆರಾಧಿಸುತ್ತಿರುವ ಕಲ್ಲಿನ ವಿಗ್ರಹದ ಹಿನ್ನೆಲೆಯಲ್ಲಿರುವ ಚಿನ್ಮಯ ಶಕ್ತಿಯ ದರ್ಶನಕ್ಕಾಗಿ ಹಾತೊರೆದು ಅದನ್ನು ಸಾಕ್ಷಾತ್ಕರಿಸಿಕೊಂಡರು.

ತೋರಿಕೆಯ ಹಿಂದೆ ಇರುವ ಸತ್ಯದ ಅನುಭವದಿಂದ ಮಾತ್ರ ನಮಗೆ ಯಥಾರ್ಥ ಜ್ಞಾನ ಹಾಗೂ ಮೇರೆಯಿಲ್ಲದ ಆನಂದ ಲಭಿಸುವುದು ಎಂದು ತಮ್ಮ ಅನುಭವದ ಮೂಲಕ ತೋರಿಸಿಕೊಟ್ಟರು; ಹಾಗೂ ಆ ಸತ್ಯವನ್ನು ಅರಿಯುವುದೇ ಮಾನವ ಜೀವನದ ಗುರಿ ಎಂದರು. ಇದನ್ನೇ ಅವರು ಭಗವಂತನ ಸಾಕ್ಷಾತ್ಕಾರ ಎಂದು ಕರೆದದ್ದು. ಪ್ರತಿಯೊಬ್ಬರೂ ಇದನ್ನು ಸಾಧಿಸಬಹುದು. ದೇವಸ್ಥಾನ, ಪೂಜೆ ಮುಂತಾದುವೆಲ್ಲ ಗೌಣ. ಬೇಕಾಗಿರುವುದು ತೀವ್ರವಾದ ಹಂಬಲ.

**ಎಷ್ಟು ಮತಗಳೋ, ಅಷ್ಟೂ ಪಥಗಳು**

ಜಗನ್ಮಾತೆಯ ದರ್ಶನವನ್ನು ಪಡೆದು ಶ್ರೀರಾಮಕೃಷ್ಣರು ಅಷ್ಟರಲ್ಲೇ ತೃಪ್ತರಾಗಲಿಲ್ಲ. ಬೇರೆ ಬೇರೆ ಧರ್ಮಗಳನ್ನು ಅನುಸರಿಸುತ್ತಿರುವವರು, ಇತರೆ ಪಂಥ ಮತಾವಲಂಬಿಗಳಾದ ಸಾಧಕರು ತಮ್ಮ ಸಾಧನೆಯ ಅಂತ್ಯದಲ್ಲಿ ಯಾವ ಗುರಿಯನ್ನು ತಲುಪುವರು ಎಂಬ ಪ್ರಶ್ನೆ ಅವರನ್ನು ಕಾಡಿತು. ಭಗವತ್ಸಂಬಂಧ

ಭಗವಾನ್ ಶ್ರೀರಾಮಕೃಷ್ಣರ ಜೀವನ-ಸಂದೇಶಗಳ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ ವಿಶ್ಲೇಷಿಸಿರುವ ಸ್ವಾಮಿ ಆತ್ಮವಿದಾನಂದಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ವಾದ ಯಾವುದೇ ಭಾವನೆ ಅವರ ಮನಸ್ಸನ್ನು ಹೊಕ್ಕರೆ ಆ ಭಾವನೆಯನ್ನು ತಮ್ಮದಾಗಿಸಿಕೊಂಡು, ಅನುಭವದಿಂದ ಅದರ ಚರಮ ಹಂತವನ್ನು ತಲುಪಲು ಅವರು ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹೀಗಾಗಿ ಪ್ರತಿಯೊಂದು ಮತದ ಸಾಧನೆಯನ್ನೂ ಅದರ ಅಂತಿಮ ಹಂತದವರೆಗೂ ಸೇರುವ ಪ್ರಯೋಗದಲ್ಲಿ ಅವರು ನಿರತರಾದರು. ಈ ಹಿಂದೆ ಮನುಕುಲದ ಇತಿಹಾಸದಲ್ಲಿ, ಆಧ್ಯಾತ್ಮಿಕ ರಂಗದಲ್ಲಿ ಯಾರೂ ಕೈಗೊಂಡಿರದ ಸಾಧನೆಗಳಲ್ಲಿ, ಪ್ರಯೋಗಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಹನ್ನೆರಡು ವರ್ಷಗಳ ದೀರ್ಘಕಾಲ ಹಿಂದೂಧರ್ಮದ ಬೇರೆ ಬೇರೆ ಪಂಥಗಳು, ಅದ್ವೈತ, ತಂತ್ರ, ಯೋಗಮಾರ್ಗಗಳು, ಭಕ್ತಿಸಾಧನೆಗಳು ಹಾಗೂ ಇಸ್ಲಾಮ್, ಕ್ರೈಸ್ತ, ಸಿಖ್ ಪಂಥಗಳನ್ನು ಆಯಾಯ ಪಂಥಗಳ ಸಾಧಕರು ಹೇಗೆ ಸಾಧನೆ ಮಾಡುತ್ತಾರೋ ಹಾಗೆಯೇ ತಾವೂ ಸಾಧನೆಗೈದು ಪ್ರತಿಯೊಂದು ಮಾರ್ಗದ ಚರಮಗುರಿಯನ್ನು ಅತ್ಯಲ್ಪ ಸಮಯದಲ್ಲಿ ಕರಗತ ಮಾಡಿಕೊಂಡರು. ಇದರಿಂದ ಎಲ್ಲ ಸಾಧಕರೂ ತಲುಪುವ ಗುರಿ ಒಂದೇ ಎಂಬುದನ್ನು ಅನುಭವದ ಮೂಲಕ ಸಾಕ್ಷಾತ್ಕರಿಸಿಕೊಂಡರು. ಈ ವಿವಿಧ ಸಾಧನೆ, ಸಿದ್ಧಿಗಳಿಂದ ಅವರು ಮಾನವ ಜೀವನದ ಗುರಿಯಾದ ಆತ್ಮಸಾಕ್ಷಾತ್ಕಾರಕ್ಕಾಗಿ **"ಎಷ್ಟು ಮತಗಳೊ ಅಷ್ಟೂ ಪಥಗಳು"** ಎಂಬ ತಮ್ಮ ಅನುಭವ ವಾಣಿಯನ್ನು ಘೋಷಿಸಿದರು.

ಸನಾತನ ಧರ್ಮದಲ್ಲಿ **ಏಕಂ ಸತ್ ವಿಪ್ರಾ ಬಹುಧಾ ವದಂತಿ** – ಸತ್ಯ ಒಂದೇ, ತಿಳಿದವರು ಅದನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಾರೆ ಎಂಬ ವೇದವಾಕ್ಯವಿದೆ. ಆದರೆ ಈ ವೇದವಾಕ್ಯವನ್ನು ಪ್ರಾಯೋಗಿಕವಾಗಿ ಒಂದೇ ಜೀವನದಲ್ಲಿ ಅನುಭವಿಸಿ ಆ ಅನುಭವದ ಆಧಾರದ ಮೇಲೆ ಅದನ್ನು ಪ್ರಮಾಣೀಕರಿಸಿದ ಉದಾಹರಣೆ ಜಗತ್ತಿನ ಇತಿಹಾಸದಲ್ಲಿ ಈ ಹಿಂದೆ ಸಿಕ್ಕಿಲ್ಲ. ಮಾನವ ಸಮಾಜ ಧಾರ್ಮಿಕ ವೈಮನಸ್ಯಗಳಿಂದ ಒಡೆದು ಚೂರುಚೂರಾಗುತ್ತಿದ್ದ ಸಮಯದಲ್ಲಿ ಈ ಅನುಭವವಾಣಿ ಸಮಾಜ ಆ ರೀತಿ ಶಿಥಿಲಗೊಳ್ಳುವುದನ್ನು ತಪ್ಪಿಸಿತು.

**ಶಿವಭಾವದಲ್ಲಿ ಜೀವಸೇವೆ**

ಆಧ್ಯಾತ್ಮಿಕ ಸಾಮ್ರಾಜ್ಯದಲ್ಲಿ ಒಬ್ಬ ಅವತಾರಪುರುಷನಿಗೆ ಮಾತ್ರ ಶ್ರೀರಾಮಕೃಷ್ಣರಿಗೆ ಆದಂತಹ ಆಧ್ಯಾತ್ಮಿಕ ಅನುಭವಗಳು ಸಾಧ್ಯ ಎಂದು ವಿದ್ವಾಂಸರ ಸಭೆಯಲ್ಲಿ ಸಿದ್ಧಪಡಿಸಲು ಭೈರವಿ ಬ್ರಾಹ್ಮಣಿಗೆ ಪ್ರೇರಣೆ ನೀಡಿತು. ಅಷ್ಟೇ ಅಲ್ಲ, ಅವರನ್ನು ಅವತಾರಗಳಲ್ಲಿ ವಿಶಿಷ್ಟರೆಂದು ಮಹಾಪಂಡಿತನಾದ ವೈಷ್ಣವ ಚರಣನೂ ಹೇಳಲು ಈ ಅನುಭವಗಳೇ ಕಾರಣ.

ಆದರೆ ಅತ್ಯಂತ ಸರಳ ಸ್ವಭಾವದ ಶ್ರೀರಾಮಕೃಷ್ಣರ ಚೇತನ ಭಗವಂತನನ್ನು ಅನಂತ ರೂಪಗಳಲ್ಲಿ ಅನುಭವಿಸುತ್ತಿತ್ತು. ಅವರ ಅನ್ವೇಷಣೆ ಎಷ್ಟು ದೂರ ಮುಟ್ಟಿತೆಂದರೆ ಭಗವಂತನು ಸರ್ವವ್ಯಾಪಿಯಾಗಿ, ಸರ್ವಾಂತರ್ಯಾಮಿಯಾಗಿ ವಿರಾಜಿಸುತ್ತಿದ್ದಲ್ಲಿ ಅವನ ಆರಾಧನೆ ಏಕೆ ಕೇವಲ ದೇವಾಲಯಗಳಿಗೆ, ಮೂರ್ತಿಗಳಿಗೆ ಸೀಮಿತವಾಗಿರಬೇಕು? ಪ್ರತಿಯೊಂದು ಜೀವಿಯೂ ಭಗವಂತನ ರೂಪವೇ ಅಲ್ಲವೇ ಎಂಬ ಜಿಜ್ಞಾಸೆ ಅವರಲ್ಲಿ ಮೂಡಿತು. ಶ್ರೀರಾಮಕೃಷ್ಣರು ಪ್ರತಿಯೊಂದು ಜೀವಿಯಲ್ಲಿಯೂ ಭಗವಂತನ ಆವಿರ್ಭಾವವನ್ನು ಅನುಭವಿಸಿ ಕಾಣುವಂತಾಯಿತು. ಶ್ರೀರಾಮಕೃಷ್ಣರ ಈ ಅನುಭವ ನರೇಂದ್ರನಿಗೆ (ನಂತರ ಸ್ವಾಮಿ ವಿವೇಕಾನಂದರು) ಆಧ್ಯಾತ್ಮಿಕ ಸಾಮ್ರಾಜ್ಯದ ಒಂದು ವಿಶಿಷ್ಟ ಆಯಾಮವನ್ನು ಪರಿಚಯ ಮಾಡಿಸಿಕೊಟ್ಟಿತು. ಪ್ರತಿಯೊಂದು ಜೀವಿಯೂ ಶಿವನೇ ಎಂಬ ಸತ್ಯದಿಂದ "ಶಿವಭಾವದಲ್ಲಿ ಜೀವಸೇವೆ"ಎಂಬ ಮಂತ್ರವನ್ನು ಅವರು ಶ್ರೀರಾಮಕೃಷ್ಣರ ಭಕ್ತರ ಸಮ್ಮುಖದಲ್ಲಿ ಪ್ರತಿಪಾದಿಸಿದರು. ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಹೃದಯದಲ್ಲಿ ಇತರರ ಕಷ್ಟಕ್ಕೆ, ದುಃಖಕ್ಕೆ ಮರುಗುವ ವಿಶ್ವಕಾರುಣ್ಯದ ಹಣತೆಯನ್ನು ಹಚ್ಚಿದರು. ಪ್ರತಿಯೊಂದು ಜೀವಿಯಲ್ಲಿಯೂ ಶಿವನಿರುವನು, ಅವನಿಗೆ ಮಾಡುವ ಸೇವೆಯಿಂದ ನಾವು ಉದ್ಧಾರವಾಗುವೆವು. ನಮ್ಮ ಮನಸ್ಸಿನ ಕಲ್ಮಶ ಕಡಿಮೆಯಾಗುವುದು, ನಮ್ಮಲ್ಲಿ ಪರಂಜ್ಯೋತಿ ಹೊಳೆಯುವುದು ಎಂದು ಬೋಧಿಸಿದರು.

ಒಮ್ಮೆ ನರೇಂದ್ರನು ತಾನು ಸದಾ ನಿರ್ವಿಕಲ್ಪ ಸಮಾಧಿಯಲ್ಲಿ ಇರಲು ಬಯಸಿದಾಗ ಅವನಿಗೆ ಛೀಮಾರಿ ಹಾಕಿ, "ಕಣ್ಣುಮುಚ್ಚಿದರೆ ಮಾತ್ರ ಭಗವಂತನಿದ್ದು ಕಣ್ಣು ತೆರೆದಾಗ ಇರುವುದು ಬೇರೆ ಯಾವುದೋ ಸತ್ಯವಲ್ಲ. ಆ ಭಗವಂತನೇ ಎಲ್ಲ ಜೀವಿಗಳಲ್ಲಿ ವಿರಾಜಿಸುತ್ತಿದ್ದಾನೆ. ನಮ್ಮ ಬದುಕು, ಸಾಧನೆಗಳು, ಅನುಭವಗಳು, ಸಂಸಾರದಲ್ಲಿ ಸಂತಪ್ತರಾದ ಜೀವಿಗಳಿಗೆ ತಂಪನ್ನು ನೀಡುವ ವಿಶಾಲ ಆಲದ ಮರದಂತಿರಬೇಕು" ಎಂದು ಹೇಳಿದರು. ಅವರ ಈ ಮಾರ್ಗದರ್ಶನದ ಆಧಾರದ ಮೇಲೆಯೇ ಮುಂದೆ ಸ್ವಾಮಿ ವಿವೇಕಾನಂದರು **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಧ್ಯೇಯವಾಕ್ಯವನ್ನು ಅಳವಡಿಸಿಕೊಂಡಿರುವ ರಾಮಕೃಷ್ಣ ಮಹಾಸಂಘವನ್ನು ಪ್ರಾರಂಭಿಸಿದರು.

**ಎಲ್ಲ ಸ್ತ್ರೀಯರಲ್ಲಿ ಜಗನ್ಮಾತೆಯ ದರ್ಶನ**

ಮಾನವ ಸಮಾಜದಲ್ಲಿ, ವಿಶೇಷವಾಗಿ ಹಿಂದೂ ಸಮಾಜದಲ್ಲಿ ಸ್ತ್ರೀಯರಿಗೆ ದೊರಕಬೇಕಾದ ಸ್ಥಾನ–ಮಾನಗಳು ದೊರೆಯದೆ, ಮಹಿಳೆಯರಿರುವುದು ಕೇವಲ ಪುರುಷನ

ಸುಖಕ್ಕಾಗಿ ಹಾಗೂ ಮಕ್ಕಳನ್ನು ಹೆರುವ ಯಂತ್ರಗಳಾಗಿ ಎಂಬ ಭಾವನೆ ಪ್ರಬಲವಾಗಿದ್ದ ಕಾಲವದು. ಆದರೆ ಶ್ರೀರಾಮ ಕೃಷ್ಣರು ತಮ್ಮ ಪತ್ನಿ ಶ್ರೀಶಾರದಾದೇವಿಯವರನ್ನು ಸಾಕ್ಷಾತ್ ಜಗನ್ಮಾತೆ ಎಂದು ಆರಾಧಿಸುವುದರ ಮೂಲಕ ನಾರೀಕುಲದ ಭವ್ಯವಾದ ಭವಿಷ್ಯಕ್ಕೆ ನಾಂದಿ ಹಾಡಿದರು. ಶ್ರೀಶಾರದಾದೇವಿ ಯವರಿಗೆ ಮುಂದೆ ರೂಪುಗೊಳ್ಳಲಿದ್ದ ರಾಮಕೃಷ್ಣ ಮಹಾ ಸಂಘದ ಜನನಿಯ ಪಾತ್ರ ವಹಿಸಲು ಬೇಕಾದ ಶಿಕ್ಷಣ ಹಾಗೂ ಪ್ರೇರಣೆಗಳನ್ನು ನೀಡಿದರು. ಕೇವಲ ತಮ್ಮ ಪತ್ನಿ ಶಾರದಾ ಮಾತೆಯವರಲ್ಲಿ ಮಾತ್ರವಲ್ಲ, ತಮ್ಮ ಬಳಿ ಬಂದ ಎಲ್ಲ ಸ್ತ್ರೀಭಕ್ತರಿಗೆ, ಶಿಷ್ಯರಿಗೆ ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿ ಸ್ತ್ರೀಶಕ್ತಿಯೆಂಬುದು ಸಾಕ್ಷಾತ್ ಜಗನ್ಮಾತೆಯ ಶಕ್ತಿ–ವೈಭವಗಳ ಸಂಕೇತವಾಗಿದೆ ಎಂಬುದನ್ನು ಮನಮುಟ್ಟುವಂತೆ ತೋರಿಸಿದರು. ಸ್ವಭಾವತಃ ಸಂಕೋಚಪ್ರವೃತ್ತಿಯ ಶ್ರೀಮಾತೆ ಯವರೇ ಮಹಿಳೆಯರ ವಿದ್ಯಾಭ್ಯಾಸದಲ್ಲೂ, ಮಹಿಳೆಯರ ಮಠದ ಅಂಕುರಾರ್ಪಣೆಯಲ್ಲೂ ಆಸಕ್ತಿ ವಹಿಸಿದರು. ಸಂಪ್ರದಾಯಗಳ ಕಟ್ಟುಪಾಡುಗಳನ್ನು ಲೆಕ್ಕಿಸದೆ ವಿದೇಶದಿಂದ ಆಗಮಿಸಿದ ಮಹಿಳೆಯರನ್ನು ತನ್ನವರನ್ನಾಗಿಸಿಕೊಂಡು, ಹಿಂದೂ ಸಮಾಜದಲ್ಲಿ ಸ್ತ್ರೀಯರ ಉನ್ನತಿಗಾಗಿ ಕೆಲಸಮಾಡಲು ಅವರಿಗೆ ಸ್ಫೂರ್ತಿ ನೀಡಿ, ಸಾಮಾಜಿಕ ಪರಿವರ್ತನೆಯ ಕೇಂದ್ರ ಬಿಂದುವಾದರು. ಮಾನವ ಸಮಾಜದ ಅಭ್ಯುದಯಕ್ಕಾಗಿ ನಾರಿಯರು ವಹಿಸಲಿರುವ ಪ್ರಧಾನ ಪಾತ್ರವನ್ನು ಮನಗಾಣಿಸಿದ ಈ ಮಹತ್ಸಾಧನೆ ಜಗತ್ತಿನ ಇತಿಹಾಸವನ್ನು ನಿರ್ಮಿಸುವ ಒಂದು ಶಕ್ತಿಯಾಗಿದೆ.

### ಸತ್ಯಯುಗ

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಆವಿರ್ಭಾವ ದೊಡನೆ ಸತ್ಯಯುಗದ ಪ್ರಾರಂಭವಾಗಿದೆ ಎಂದು ನುಡಿ ದಿದ್ದಾರೆ. ಸತ್ಯಯುಗದ ಪ್ರಸ್ತಾಪ ನಮ್ಮ ಧರ್ಮಗ್ರಂಥಗಳಲ್ಲಿ ಬರುತ್ತದೆ. ಧರ್ಮವು ತ್ರೇತಾಯುಗದಲ್ಲಿ ಮೂರು ಕಾಲುಗಳ ಮೇಲೆ, ದ್ವಾಪರದಲ್ಲಿ ಎರಡು ಹಾಗೂ ಕಲಿಯುಗದಲ್ಲಿ ಒಂದೇ ಕಾಲಿನ ಮೇಲೆ ಕಷ್ಟಪಟ್ಟು ನಿಂತಿರುತ್ತದೆ. ಆದರೆ ಸತ್ಯಯುಗದಲ್ಲಿ ನಾಲ್ಕೂ ಕಾಲುಗಳ ಮೇಲೆ ಧರ್ಮವು ಸುಭದ್ರವಾಗಿ ನಿಲ್ಲುವುದು ಎಂದು ನಮ್ಮ ಧರ್ಮಗ್ರಂಥಗಳು ತಿಳಿಸುತ್ತವೆ. ಸ್ವಾಮಿ ವಿವೇಕಾನಂದರು ಯಾವ ಅರ್ಥದಲ್ಲಿ ಸತ್ಯಯುಗ ಪ್ರಾರಂಭವಾಗಿದೆ ಎಂದು ಹೇಳಿರಬಹುದು? ಶ್ರೀರಾಮಕೃಷ್ಣರು ಹುಟ್ಟಿದ ಸಮಯದಲ್ಲಿ ಹಿಂದೂ ಸಮಾಜ ಅತ್ಯಂತ ಸಂಕುಚಿತ ಮನೋಭಾವವನ್ನು ಹೊಂದಿತ್ತು. ಲೆಕ್ಕವಿಲ್ಲದಷ್ಟು ಪಂಗಡಗಳು, ಒಳಪಂಗಡಗಳನ್ನು ಸೃಷ್ಟಿಸಿ, ಶಾಸ್ತ್ರಗಳು ಬೋಧಿಸುವ ಧರ್ಮದ ನಿತ್ಯಸತ್ಯಗಳು ಉಚ್ಚ ಕುಲದವರ ಸ್ವತ್ತು ಎಂದು ತಿಳಿದು ಅವುಗಳ ಜೀವದಾಯಕ ಸತ್ಯಗಳಿಂದ ಸಮಾಜದ ನಿಮ್ನ ವರ್ಗದವರನ್ನು ವಂಚಿಸಿ, ಅನೇಕ ಮೂಢನಂಬಿಕೆಗಳನ್ನೇ ನಿಜವಾದ ಧರ್ಮವೆಂದು ಬಗೆದುದರಿಂದ ಧರ್ಮದ ಆಚರಣೆ ಬಹಳ ಕಷ್ಟವಾಗಿತ್ತು. ಶ್ರೀರಾಮಕೃಷ್ಣರು ಧರ್ಮ ಮತ್ತು ಅಧ್ಯಾತ್ಮ ಸತ್ಯಗಳನ್ನು ಎಲ್ಲ ರೀತಿಯ ಗೊಂದಲಗಳಿಂದ, ಕಟ್ಟುಗಳಿಂದ ಪಾರುಮಾಡಿ, ಪುರೋಹಿತಶಾಹಿಯಿಂದ ಮುಕ್ತಗೊಳಿಸಿ ಜಾತಿ, ಕುಲ, ಮತ ಭೇದಗಳಿಲ್ಲದೆ ಎಲ್ಲರಿಗೂ ಅವುಗಳನ್ನು ಬೋಧಿಸಿ ದ್ದರಿಂದ ಪ್ರತಿಯೊಬ್ಬರೂ ಆಧ್ಯಾತ್ಮಿಕ ಜೀವನದಲ್ಲಿ ಮುಂದು ವರೆಯಲು ಮಾರ್ಗವನ್ನು ಮುಕ್ತವಾಗಿರಿಸಿರುವರು.

ಜೀವನದ ಗುರಿಯ ಸರಿಯಾದ ನಿರೂಪಣೆಯು ನಮಗೆ ಜೀವನದಲ್ಲಿ ತಲುಪಬೇಕಾದ ಗುರಿಯ ಕಲ್ಪನೆಯನ್ನು ನೀಡುತ್ತದೆ. "ಎಷ್ಟು ಮತಗಳೋ ಅಷ್ಟೂ ಪಥಗಳು" ಎಂಬ ಸೂತ್ರವು ನಾವು ಹುಟ್ಟಿರುವ ಧರ್ಮಮಾರ್ಗದಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳಲು ಉತ್ತೇಜಿಸುತ್ತದೆ. 'ಶಿವಭಾವದಲ್ಲಿ ಜೀವಸೇವೆ' ಎಂಬ ಆದರ್ಶವು ನಮ್ಮ ಕಾರ್ಯಕ್ಷೇತ್ರವನ್ನು ದೈವೀಕರಣ ಗೊಳಿಸುವುದು ಹೇಗೆಂದು ಬೋಧಿಸುತ್ತದೆ. ಅದೇ ರೀತಿ ಅನ್ನದಾನದಿಂದ ಹಿಡಿದು ಉನ್ನತವಾದ ಆಧ್ಯಾತ್ಮಿಕ ಜ್ಞಾನ ದಾನದವರೆಗೆ ವಿವಿಧಹಂತಗಳ ಸೇವಾ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಎಲ್ಲರ ಅಂತರಾಳದಲ್ಲಿರುವ ಸುಪ್ತ ದಿವ್ಯಚೇತನವನ್ನು ಜಾಗೃತಗೊಳಿಸಿ, ಕಡೆಗೆ, ಇಡೀ ಸಮಾಜ ವನ್ನೇ ದಿವ್ಯ ಚೈತನ್ಯಮಯವನ್ನಾಗಿ ಮಾಡುವ ಶಕ್ತಿ ಈ ಸೇವಾ ಆದರ್ಶಕ್ಕೆ ಇದೆ. ಹಾಗೆಯೇ ಎಲ್ಲ ಸ್ತ್ರೀಯರಲ್ಲಿ ಮಾತೃದರ್ಶನ ಎಂಬ ಆದರ್ಶದಿಂದ ಸ್ತ್ರೀಯರಿಗೆ ಸಲ್ಲಬೇಕಾದ ಮಾನ್ಯತೆ ದೊರಕಿ, ಅವರು ಸಾಮಾಜಿಕ ಏಳ್ಗೆಯಲ್ಲಿ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳುವಂತಾಗುತ್ತದೆ. ಯಾವುದೇ ವ್ಯಕ್ತಿ, ಕುಟುಂಬ, ಸಮಾಜ, ದೇಶಗಳಿಗೆ ಶ್ರೀರಾಮಕೃಷ್ಣರ ಸಂದೇಶದ ಈ ಅಂಶಗಳು ದಿಕ್ಸೂಚಿಯಾಗಿವೆ.

ಸಾಮಾಜಿಕ ಜೀವನದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಸಾಧನೆಯೆಂದು ಬಗೆದು ಶ್ರದ್ಧೆಯಿಂದ ಮಾಡಿದಲ್ಲಿ ವ್ಯಕ್ತಿಯ ಆತ್ಮೋನ್ನತಿಯ ಜತೆಗೆ ಸಮಾಜದ ನೈತಿಕ ಮಟ್ಟವೂ ಉತ್ತಮಗೊಳ್ಳುತ್ತದೆ ಹಾಗೂ ಬೇರೆಯವರನ್ನು ಸ್ವೀಕರಿಸಿ ಸಮನ್ವಯದ ಭಾವನೆ ಬೆಳೆಸಲು ಸಹಾಯಕವಾಗು ತ್ತದೆ. ಇದರೊಂದಿಗೆ ತಮ್ಮ ತಮ್ಮ ಧರ್ಮದಲ್ಲಿನ ಶ್ರದ್ಧೆಯೂ ದೃಢವಾಗುತ್ತದೆ.

ಶ್ರೀರಾಮಕೃಷ್ಣರ ನೇರ ಶಿಷ್ಯರಿದ್ದದ್ದು ಕೆಲವೇ ಮಂದಿ. ಇಂದಿಗೂ ಅವರ ಹೆಸರಿನಲ್ಲಿ ದೀಕ್ಷಿತರಾದ ಭಕ್ತರು ಕೆಲವು ಲಕ್ಷಗಳಷ್ಟೇ ಇರಬಹುದು. ಆದರೆ ಅವರ ಜೀವನ ಸಂದೇಶಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕೋಟ್ಯಂತರ ಜನರಿಗೆ ತಮ್ಮ ತಮ್ಮ ಧರ್ಮಗಳಲ್ಲಿ ಮುಂದುವರೆಯಲು ಪ್ರೇರಣೆ ನೀಡಿವೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ

ಆವಿರ್ಭಾವವಾದಂದಿನಿಂದ ಸಮಗ್ರವಿಶ್ವದ ಬ್ರಹ್ಮ ಕುಂಡಲಿನಿ ಜಾಗೃತವಾಗಿದೆ, ಇದರ ಪರಿಣಾಮವಾಗಿ ಬಹಳ ಸುಲಭವಾಗಿ ಎಲ್ಲ ಸಾಧಕರ ಆಧ್ಯಾತ್ಮಿಕ ಉನ್ನತಿ ಸಾಧ್ಯವಾಗುವುದು ಎಂದಿದ್ದಾರೆ.

ಶ್ರೀರಾಮಕೃಷ್ಣರ ಉಪದೇಶಗಳು ಧರ್ಮಗಳ ನಡುವಣ ಘರ್ಷಣೆಯನ್ನು ಕಡಿಮೆಯಾಗಿಸುವಲ್ಲಿ ಪರಿಣಾಮಕಾರಿಯಾಗಿವೆ. ಇತರೆ ಧರ್ಮಗಳನ್ನು ಗೌರವ ಹಾಗೂ ಶ್ರದ್ಧೆಯಿಂದ ತಿಳಿದುಕೊಳ್ಳುವ ಪ್ರಯತ್ನ ಹೆಚ್ಚುತ್ತಿದೆ. ಈ ಕಾರಣದಿಂದಲೇ ವಿಶ್ವಧರ್ಮ ಸಮ್ಮೇಳನಗಳೂ, ಅಂತರ್ಧಾರ್ಮಿಕ ವಿಚಾರ ವಿನಿಮಯಗಳೂ, ಇತರರ ಧರ್ಮಗಳ ತೌಲನಿಕ ಅಧ್ಯಯನ ಇತ್ಯಾದಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನಡೆಯುತ್ತಿವೆ.

ಶ್ರೀರಾಮಕೃಷ್ಣ–ವಿವೇಕಾನಂದರ ಕರೆ ಕೇವಲ ಹಿಂದೂಗಳಿಗೆ ಮಾತ್ರ ಸೀಮಿತವಲ್ಲ ಅಥವಾ ಕೇವಲ ಈ ದೇಶಕ್ಕೆ ಸೀಮಿತವಲ್ಲ. ಸಮಸ್ತ ಮಾನವತೆಗೆ, ದೇಶ, ಕಾಲ ಅಥವಾ ಜಾತಿಗಳ ಭೇದವಿಲ್ಲದೆ ದಿವ್ಯತ್ರಯರ ಸಂದೇಶಗಳು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರೆಯಲು ಪ್ರೇರಣೆ ನೀಡುತ್ತಿವೆ. "ದಿವ್ಯತೆಯ ಬಗ್ಗೆ ಶ್ರದ್ಧೆ ಹಾಗೂ ಜೀವನದ ಗುರಿಯ ಬಗ್ಗೆ ಸರಿಯಾದ ಅರಿವು"—ಇವು ಆಧ್ಯಾತ್ಮಿಕ ಜಾಗೃತಿಗೆ ಪ್ರೇರಕವಾಗಿದ್ದು ನೂತನ ಸತ್ಯಯುಗದ ಪ್ರಮುಖ ಲಕ್ಷಣವೆಂದೆನಿಸುತ್ತವೆ.

ಅನೇಕ ಸಂಕಷ್ಟಗಳನ್ನು ಎದುರಿಸುತ್ತಿರುವ ಇಂದಿನ ಜಾಗತಿಕ ಸನ್ನಿವೇಶದಲ್ಲಿ ಶ್ರೀರಾಮಕೃಷ್ಣರ ಬದುಕು ಮತ್ತು ಸಂದೇಶಗಳ ಪ್ರಸ್ತುತತೆಯನ್ನು ಹಾಗೂ ಶ್ರೀರಾಮಕೃಷ್ಣ ಅವತಾರದ ವೈಶಿಷ್ಟ್ಯದ ಮಹತ್ವವನ್ನು ಕುರಿತು ವಿಶ್ವದ ಶ್ರೇಷ್ಠ ಇತಿಹಾಸಜ್ಞ ಆರ್ನಾಲ್ಡ್ ಟಾಯ್ನ್‌ಬೀ ಅವರು ಮನಮುಟ್ಟುವ ಈ ಮಾತುಗಳಲ್ಲಿ ಹೇಳಿದ್ದಾರೆ:

"ಶ್ರೀರಾಮಕೃಷ್ಣರ ವೈಶಿಷ್ಟ್ಯವಿರುವುದು ಅವರ ಸಂದೇಶವು ಕ್ರಿಯಾತ್ಮಕವಾಗಿ ಅಭಿವ್ಯಕ್ತಗೊಂಡದ್ದರಲ್ಲೇ. ಹಾಗೆ ನೋಡಿದರೆ ಅವರಿತ್ತ ಸಂದೇಶವು ಹಿಂದೂಧರ್ಮವು ಇತಿಹಾಸದುದ್ದಕ್ಕೂ ನೀಡುತ್ತಿರುವ ಸಂದೇಶವೇ ಆಗಿದೆ. ... ಹಿಂದೂಧರ್ಮವು, ಉತ್ಕ್ರಾಂತಶೀಲವಾದ ಪ್ರತಿಯೊಂದು ಧರ್ಮದ ಮಹತ್ ದರ್ಶನವನ್ನು ಸತ್ಯವೆಂದೂ, ಅದರ ಮಾರ್ಗವು ಸರಿಯೆಂದೂ ಸಾರುತ್ತ ಬಂದಿದೆ. ಎಲ್ಲ ಧರ್ಮಗಳೂ ಒಂದೇ ಸತ್ಯದ ದರ್ಶನವನ್ನು ವಿಭಿನ್ನ ರೀತಿಯಲ್ಲಿ ವಿವರಿಸುತ್ತವೆ ಮತ್ತು ಮನುಷ್ಯಪ್ರಯತ್ನಗಳೆಲ್ಲದರ ಗುರಿಯನ್ನು ತಲುಪಲು ವಿಭಿನ್ನ ಮಾರ್ಗಗಳಾಗಿರುವುದರಿಂದ ಪ್ರತಿಯೊಂದು ಧರ್ಮವೂ ಮಾನವ ಜನಾಂಗಕ್ಕೆ ಅನಿವಾರ್ಯವಾಗಿದೆ. ಹೀಗಾಗಿ ಪ್ರತಿಯೊಂದು ಧರ್ಮದಲ್ಲಿಯೂ ಇತರೆ ಧರ್ಮದಲ್ಲಿ ಇರದ ಒಂದು ವಿಶಿಷ್ಟ ಆಧ್ಯಾತ್ಮಿಕ ಮೌಲ್ಯವಿದೆ.

"ಇದನ್ನು ಸೈದ್ಧಾಂತಿಕವಾಗಿ ತಿಳಿಯುವುದೇನೋ ಒಳ್ಳೆಯದೇ. ಆದರೆ ಅಷ್ಟೇ ಸಾಲದು. ಧರ್ಮವು ಬರೀ ಸೈದ್ಧಾಂತಿಕವಾಗಿ ಅಧ್ಯಯನ ಮಾಡಲ್ಪಡುವ ವಿಷಯವಲ್ಲ. ಅದನ್ನು ಅನುಭವದಲ್ಲಿ ತಂದುಕೊಂಡು ಬಾಳಬೇಕು. ವಿಶೇಷವಾಗಿ ಈ ಕ್ಷೇತ್ರದಲ್ಲಿಯೇ ಶ್ರೀರಾಮಕೃಷ್ಣರು ತಮ್ಮ ಅನನ್ಯತೆಯನ್ನು ಮೆರೆದುದು. ಭಾರತದ ಸನಾತನ ಧರ್ಮದ ಭಿನ್ನಭಿನ್ನವಾದ ಸಂಪ್ರದಾಯಗಳ ಸಾಧನೆಗಳಲ್ಲಿ ಒಂದರ ನಂತರ ಮತ್ತೊಂದರಂತೆ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡರು. ಅಷ್ಟಕ್ಕೇ ನಿಲ್ಲದೆ ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳ ಸಾಧನೆಗಳಲ್ಲೂ ನಿರತರಾದರು. ಅವರಿಗಾಗಿದ್ದ ಆಧ್ಯಾತ್ಮಿಕ ಅನುಭೂತಿಗಳು ಹಾಗೂ ಅವರ ಸಾಧನೆಗಳ ವ್ಯಾಪಕತೆಯ ಪ್ರಮಾಣ ಎಷ್ಟು ಅಗಾಧವಾದದ್ದೆಂದರೆ, ಪ್ರಾಯಶಃ ಭಾರತದಲ್ಲೇ ಆಗಲಿ ಅಥವಾ ವಿಶ್ವದ ಯಾವುದೇ ಭಾಗದಲ್ಲಾಗಲಿ ಎಂತಹ ಆಧ್ಯಾತ್ಮಿಕ ಧುರೀಣರೂ ಈ ಮುಂಚೆ ಇದನ್ನು ಸಾಧಿಸಿರಲಿಲ್ಲ...

"ಅತ್ಯಗತ್ಯವಾಗಿದ್ದ ಒಂದು ಸಮಯದಲ್ಲಿ ಶ್ರೀರಾಮಕೃಷ್ಣರು ನಮ್ಮ ಮಧ್ಯೆ ಮೈದೋರಿದರು ಹಾಗೂ ತಮ್ಮ ಸಂದೇಶವನ್ನು ಸಾರಿದರು. ಹಿಂದೂ ಧಾರ್ಮಿಕ ಸಂಪ್ರದಾಯದಲ್ಲಿ ಬೆಳೆಯದ ಬೇರೆ ಯಾರಿಂದಲೂ ಅವರಿತ್ತಂತಹ ಸಂದೇಶ ನೀಡಲು ಸಾಧ್ಯವಾಗುತ್ತಿರಲಿಲ್ಲ. ಅವರು ಹುಟ್ಟಿದ ಕಾಲವಾದರೂ ಎಂತಹುದು? ಮೊಟ್ಟಮೊದಲ ಬಾರಿಗೆ ಪ್ರಪಂಚವೆಲ್ಲಾ ಒಗ್ಗೂಡಿದ ಕಾಲವದು. ನಾವಿಂದು ಜಾಗತಿಕ ಇತಿಹಾಸದಲ್ಲಿನ ಸ್ಥಿತ್ಯಂತರದ ಒಂದು ನಿರ್ಣಾಯಕ ಅಧ್ಯಾಯದಲ್ಲಿದ್ದೇವೆ. ಆದರೆ ಈ ಅಧ್ಯಾಯದಿಂದ ಈಗಾಗಲೇ ಸ್ಪಷ್ಟವಾಗಿರುವ ಅಂಶವೆಂದರೆ – ಮಾನವ ಜನಾಂಗ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವ ಒಂದು ಗಂಡಾಂತರದಿಂದ ಪಾರಾಗಬೇಕಾದರೆ ಪಾಶ್ಚಾತ್ಯ ಮೂಲದ ಈ ಆಧುನಿಕ ತಂತ್ರಜ್ಞಾನದ ಇತಿಹಾಸದ ಅಧ್ಯಾಯವು ಪೌರಸ್ತ್ಯದ ವಿವೇಕದಲ್ಲಿ ತನ್ನ ಅಂತಿಮ ಸಾರ್ಥಕತೆಯನ್ನು ಕಂಡುಕೊಳ್ಳಬೇಕು. ಪಾಶ್ಚಾತ್ಯರ ತಂತ್ರಜ್ಞಾನವು ಇಂದು ಜಗತ್ತನ್ನು ಭೌತಿಕವಾಗಿ ಒಗ್ಗೂಡಿಸುವುದರಲ್ಲಿ ಸಮರ್ಥವಾಗಿದೆ. ಆದರೆ ಈ ತಂತ್ರಜ್ಞಾನವು ಭೌತಿಕವಾದ ಅಂತರವಷ್ಟನ್ನೇ ನಾಶಗೊಳಿಸಿಲ್ಲ. ಜಗತ್ತಿನ ವಿಭಿನ್ನ ಜನರು ಪರಸ್ಪರ ಅರಿತು ಆಪ್ತರಾಗುವ ಮೊದಲೇ, ಈ ತಂತ್ರಜ್ಞಾನವು ಅವರ ಕೈಯಲ್ಲಿ ಎಂತಹ ಅತ್ಯಾಧುನಿಕ ಮಾರಕಾಸ್ತ್ರಗಳನ್ನು ಇಟ್ಟಿದೆಯೆಂದರೆ ಪ್ರತಿಯೊಬ್ಬರೂ ಮತ್ತೊಬ್ಬರನ್ನು ಪರಸ್ಪರ ಕಣ್ಣಲ್ಲಿ ತಿವಿಯುತ್ತಾ ವಿನಾಶೋನ್ಮುಖಿರಾಗುವಂತೆ ಮಾಡಿದೆ. ಮಾನವ ಇತಿಹಾಸದಲ್ಲಿ ವಿನಾಶದ ಅಂಚನ್ನು ತಲುಪಿರುವ ಇಂತಹ ಒಂದು ಅತ್ಯಂತ ಘೋರವಾದ ಗಂಡಾಂತರದಿಂದ ಮಾನವ ಜನಾಂಗದ ವಿಮೋಚನೆಗೆ ಇರುವ ಮಾರ್ಗ ಒಂದೇ—ಅದೇ ಭಾರತೀಯ ಮಾರ್ಗ... ಶ್ರೀರಾಮಕೃಷ್ಣರು ಅಧಿಕೃತವಾಗಿ ಪ್ರಮಾಣೀಕರಿಸಿರುವ ಧರ್ಮಗಳ ಸಾಮರಸ್ಯ ಹಾಗೂ ಸೌಹಾರ್ದತೆ." ★